ಕೃಷ್ಣೇಗೌಡ

**ಪಿ.ಡಬ್ಲ್ಯೂ-1**

**ದಿನಾಂಕ 28.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
ಮುಂದುವರಿದ ಪಾಟಿ ಸವಾಲು ಪ್ರತಿವಾದಿಯ ಪರ ಶ್ರೀ. ಜಿ ಎಂ **ವಕೀಲರವರಿಂದಃ**

ದಾವಾ ಜಮೀನನ್ನು ಸೀತಾರಾಮರವರಿಂದ ಖರೀದಿ ಮಾಡಿರುತ್ತೇನೆ. ಸೀತಾರಾಮರವರ ತಂದೆಯ ಹೆಸರು ನಾರಾಯಣಪ್ಪ. ದಾವಾ ಸ್ವತ್ತು ದೇವರಕೊಡುಗೆ ಜಮೀನಾಗಿದ್ದು, ದರ್ಕಾಸ್ತು ಮೂಲಕ ನಾರಾಯಣಪ್ಪನವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ನಾರಾಯಣಪ್ಪನವರು ಮೃತಪಟ್ಟ ನಂತರ ಅಂಕನಾಥೇಶ್ವರ ದೇವರ ಪೂಜಾರರಾಗಿ ಪೌತಿ ಖಾತೆಯಾಗಿ ನಾರಾಯಣಪ್ಪನವರ ಮಗನಾದ ಸೀತಾರಾಮ ದಾವಾ ಸ್ವತ್ತು ಬಂದಿರುತ್ತದೆ ಎಂದರೆ ಸರಿ.

2. ನಾರಾಯಣಪ್ಪನವರ ಕುಟುಂಬಕ್ಕೆ ಭೂ ನ್ಯಾಯಮಂಡಳಿಯಿಂದ ಸರ್ವೆ ನಂಬರ 109 ರಲ್ಲಿ 3 ಎಕರೆ 4 ಗುಂಟೆ, ಸರ್ವೆ ನಂಬರ 152 ರಲ್ಲಿ 1 ಎಕರೆ 36 ಗುಂಟೆ, ಸರ್ವೆ ನಂಬರ 100 ರಲ್ಲಿ 5 ಎಕರೆ ಜಮೀನು ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರಗಳನ್ನು ಮಂಜೂರು ಮಾಡುವಾಗ ಅಂಕದೇವರ ಕೊಡುಗೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅಂಕದೇವರ ಕೊಡುಗೆ ಬೇರೆ ಜಮೀನು ಇರುತ್ತದೆ ಎಂದು ಉತ್ತರಿಸಿದರು.

3. ನಾನು ಕ್ರಯಕ್ಕೆ ಪಡೆದಿರುವ ಸರ್ವೆ ನಂಬರ 109/2 ವಿಸ್ತೀರ್ಣ 32 ಗುಂಟೆಯ ಉತ್ತರ ಭಾಗಕ್ಕೆ 3 ನೇ ಪ್ರತಿವಾದಿಯ ಜಮೀನು ಇರುತ್ತದೆ. 3 ನೇ ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಲೋಕಪಾವನಿ ಹಳ್ಳ ಹಾಗೂ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ, ನಮ್ಮ ಜಮೀನು ಇದೆ. 3 ನೇ ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ ಲೋಕಪಾವನಿ ಹಳ್ಳ ಹಾದು ಹೋಗಿ ಚಿಕ್ಕಮರಳಿ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿಯಲ್ಲ. ಸುಮಾರು 40 ರಿಂದ 50 ವರ್ಷಗಳಿಂದಲೂ ಲೋಕಪಾವನಿ ಹಳ್ಳ ಹಾದು ಹೋಗಿ ಚಿಕ್ಕಮರಳಿ ಗ್ರಾಮ ಹಾಗೂ ಹಿರೇಮರಳಿ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿಯಲ್ಲ. ಸದರಿ ರಸ್ತೆಯನ್ನು ಈಗಲೂ ಸಹಾ ಸಾರ್ವಜನಿಕರು ಅವರವರ ಜಮೀನುಗಳಿಗೆ ಹೋಗಲು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ಕೃಷ್ಣೇಗೌಡ
**ಪಿ.ಡಬ್ಲ್ಯೂ-1**

4. ದಾವಾ ಸ್ವತ್ತಿನಲ್ಲಿ ಈಶಾನ್ಯ ನೈರುತ್ಯ ಮಾರ್ಗವಾಗಿ 6 ಗುಂಟೆ ಜಮೀನನ್ನು ರಸ್ತೆಗಾಗಿ ಬಿಡಲಾಗಿದೆ ಎಂದರೆ ಸರಿಯಲ್ಲ. ನಾನು ಕನಗನಮರಡಿ ಗ್ರಾಮದ ಗ್ರಾಮ ನಕ್ಷೆಯನ್ನು ನೋಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ರೆವಿನ್ಯೂ ದಾಖಲೆಗಳನ್ವಯ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

5. ಆರ್ ಮಿಸ್ ನಂಬರ 32/2016-17 ಪ್ರಕರಣವನ್ನು ಪ್ರತಿವಾದಿಯರು ದಾಖಲಿಸಿರುತ್ತಾರೆ. ಪ್ರತಿವಾದಿಗಳು ಸದರಿ ಪ್ರಕರಣವನ್ನು ಯಾವ ಉದ್ದೇಶಕ್ಕಾಗಿ ದಾಖಲಿಸಿರುತ್ತಾರೋ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ಎದುರುದಾರರಾಗಿದ್ದು, ವಕೀಲರನ್ನು ನೇಮಕ ಮಾಡಿರುತ್ತೇನೆ ಎಂದರೆ ಸರಿ. ಆರ್ ಮಿಸ್ ಪ್ರಕರಣದ ಬಗ್ಗೆ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಮೌನವಾಗಿದ್ದರು. ಸದರಿ ಪ್ರಕರಣವು ನಮ್ಮ ಪರವಾಗಿ ಆಗಿದೆ ಎಂದು ಎ ಸಿ ನ್ಯಾಯಾಲಯದಲ್ಲಿ ತಿಳಿಸಿದರು. ಸದರಿ ಪ್ರಕರಣದ ತೀರ್ಮಾನದಂತೆ ದಾವಾ ಸ್ವತ್ತಿನಲ್ಲಿ 6 ಗುಂಟೆ ಜಾಗವನ್ನು ರಸ್ತೆಗಾಗಿ ಮೀಸಲಿಡಿಸಲಾಗಿದೆ ಹಾಗೂ ಸಾರ್ವಜನಿಕರು ಓಡಾಡಲು ಸದರಿ ರಸ್ತೆಗೆ ತೊಂದರೆ ನೀಡಬಾರದು ಎಂದು ಉಪ ವಿಭಾಗಾಧಿಕಾರಿಗಳು ಆದೇಶ ನೀಡಿದ್ದರು ಎಂದರೆ ಸಾಕ್ಷಿಯು 50 ವರ್ಷಗಳಿಂದ ಯಾವ ರಸ್ತೆಯನ್ನು ಸಾರ್ವಜನಿಕರು ಉಪಯೋಗಿಸುತ್ತಿದ್ದಾರೋ ಆ ರಸ್ತೆಯಲ್ಲಿ ಓಡಾಡಲಿ ಎಂದು ತೀರ್ಮಾನವಾಗಿದೆ ಎಂದು ನುಡಿದರು.

6. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪ್ರತಿವಾದಿಯರು ಹಾಗೂ ಗ್ರಾಮಸ್ಥರು ದಾವಾ ಸ್ವತ್ತಿನಲ್ಲಿರುವ ರಸ್ತೆಯನ್ನೇ ಓಡಾಡಲು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು 50 ವರ್ಷಗಳಿಂದ ಅದೇ ರಸ್ತೆ ಉಪಯೋಗಿಸುತ್ತಿದ್ದಾರೆ ಎಂದು ನುಡಿದರು. 50 ವರ್ಷಗಳಿಂದ ಸಾರ್ವಜನಿಕರು ಓಡಾಡುತ್ತಿರುವ ರಸ್ತೆಯನ್ನೇ ಪ್ರತಿವಾದಿಯರು ಉಪಯೋಗಿಸಲು ನನಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ. ನಮ್ಮ ಜಮೀನಿನಲ್ಲಿ 6 ಗುಂಟೆ ರಸ್ತೆಗೆಂದು ಮೀಸಲಿಟ್ಟಿರುವ ಜಾಗದಲ್ಲಿ ಓಡಾಡಲು ಬಿಟ್ಟಿರುವ ಜಾಗದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ 6 ಗುಂಟೆ ಜಾಗವನ್ನು ರಸ್ತೆಗಾಗಿ ಮೀಸಲಿಡಲಾಗಿದೆ ಎಂದು ಕಾನೂನುಬದ್ಧವಾಗಿ ವ್ಯಕ್ತವಾದರೆ ಸದರಿ ರಸ್ತೆಯನ್ನು ಬಿಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಸಾರ್ವಜನಿಕರು 50 ವರ್ಷಗಳಿಂದ ಯಾವ ರಸ್ತೆಯನ್ನು ಉಪಯೋಗಿಸುತ್ತಿದ್ದರು ಅದೇ ರಸ್ತೆಯನ್ನೇ ಉಪಯೋಗಿಸಲಿ ಎಂದು ನುಡಿದರು.

ಅ ದಾ ಸಂ 72/2022

ಕೃಷ್ಣೇಗೌಡ
**ಪಿ.ಡಬ್ಲ್ಯೂ-1**

50 ವರ್ಷಗಳಿಂದ ಉಪಯೋಗಿಸುತ್ತಿರುವ ರಸ್ತೆಯು ಪ್ರತಿವಾದಿಗಳ ಅಣ್ಣ ತಮ್ಮಂದಿರಿಗೆ ವಿಭಾಗವಾಗಿರುವ ಕಾರಣ ಸದರಿ ರಸ್ತೆಯನ್ನು ಉಪಯೋಗಿಸಲು ಆಗುತ್ತಿಲ್ಲ, ಈಗ ಕಾನೂನುಬದ್ಧವಾಗಿರುವ ರಸ್ತೆಯನ್ನು ಪ್ರತಿವಾದಿಯರು ಉಪಯೋಗಿಸಬೇಕಾಗುತ್ತದೆ ಎಂದು ನುಡಿದರು.

7. 2022 ರಲ್ಲಿ ಕರ್ನಾಟಕ ಸರ್ಕಾರವು ಒಂದು ಆದೇಶವನ್ನು ಹೊರಡಿಸಿರುತ್ತದೆ, ಅದರ ಬಗ್ಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದರು. ಖಾಸಗಿ ಜಮೀನಿನಲ್ಲಿ ವ್ಯವಸಾಯಗಾರರು ತಮ್ಮ ಜಮೀನುಗಳಿಗೆ ಹೋಗಲು ದಾರಿಯನ್ನು ಉಪಯೋಗಿಸುತಿದ್ದರೆ ಸದರಿಯವರಿಗೆ ತೊಂದರೆ ನೀಡಬಾರದು ಎಂದು ಆದೇಶ ಹೊರಡಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಜಮೀನು ಅವರ ಪೌತಿ ಆಧಾರದ ಮೇಲೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲೇ ದಾವಾ ಸ್ವತ್ತಿನಲ್ಲಿ ರಸ್ತೆ ಅಸ್ತಿತ್ವದಲ್ಲಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ರಸ್ತೆಯನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ದೇವರ ಕೊಡುಗೆ ಜಮೀನಾಗಿದ್ದು, ನಮಗೆ ಯಾವುದೇ ರೀತಿಯ ಹಕ್ಕು ಬಾದ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
ಮುಂದುವರಿದ ವಾದಿ ಪರ ವಿಚಾರಣೆಗೆ ಸಮಯಾವಕಾಶ ನೀಡಲಾಗಿದೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ **ಸಿವಿಲ್ ಜಡ್ಜ್** ಮತ್ತು
**ಜೆಎಂಎಫ್‌ಸಿ**, ಪಾಂಡವಪುರ